ಆಯವ್ಯಯದಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಅನುದಾನ ಒದಗಿಸುವುದು

878 (1022) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿನ ಆಯವ್ಯಯದಲ್ಲಿ ಸಮಾಜ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ Incentive Award ಈ ಯೋಜನೆಗೆ ಎಷ್ಟು ಅನುದಾನವನ್ನು ಒದಗಿಸಲಾಗಿದೆ;

ಆ) ಸದರಿ ಯೋಜನೆಗೆ ಬಿಡುಗಡೆಯಾದ ಮೊತ್ತ ಹಾಗೂ ವೆಚ್ಚದ ವಿವರ ನೀಡುವುದು;

ಇ) ವೆಚ್ಚ ಮಾಡದೇ ಉಳಿದಿರುವ ಮೊತ್ತವೆಷ್ಟು (ವಿವರ ನೀಡುವುದು)?

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಕ್ರಮವಾಗಿ ಶೇ.60 ರಿಂದ ಶೇ.75 ಹಾಗೂ ಶೇ.75 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಕ್ರಮವಾಗಿ ರೂ. 5000.00 ಹಾಗೂ ರೂ.10000.00 ಮೊತ್ತದ ಪ್ರೋತ್ಸಾಹ ಧನ ನೀಡಲಾಗುತ್ತಿದೆ. ಸದರಿ ಉದ್ದೇಶಕ್ಕೆ 2009–10ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ರೂ.1579.00 ಲಕ್ಷ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ರೂ.260.00 ಲಕ್ಷ ಒದಗಿಸಲಾಗಿತ್ತು.

ಆ) ಆ ಸಂಬಂಧ ವಿವರ ಈ ಕೆಳಗಿನಂತಿದೆ.

(ರೂ. ಲಕ್ಷಗಳಲ್ಲಿ)

ಪ್ರವರ್ಗ	ಬಿಡುಗಡೆ ಮಾಡಿದ ಮೊತ್ತ	ವೆಚ್ಚ
ಪರಿಶಿಷ್ಟ ಜಾತಿ	1579.00	800.00
ಪರಿಶಿಷ್ಟ ವರ್ಗ	260.00	260.00

ನಂತರ ದಿ: 11–03–2010ರ ಆದೇಶದಲ್ಲಿ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಅನ್ವಯಿಸುವಂತೆ ರೂ.779.00 ಲಕ್ಷಗಳ ಮೊತ್ತದ ಅನುದಾನ ಬಿಡುಗಡೆ ಮಾಡಲಾಗಿದ್ದು, ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಗೆ ಮರು ಬಿಡುಗಡೆಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.